



# ಸ್ನೇಕ್ ರೋಬಾಟ್..!



ಇದೊಂದು ವಿಶಿಷ್ಟ 'ಹಾವು'. ಎಲ್ಲ ಹಾವುಗಳಂತೆಯೇ ಎತ್ತ ಬೇಕಾದರೂ ಇದು ಸುಳಿದಾಡುತ್ತದೆ. ಒಂದೇ ವ್ಯತ್ಯಾಸ ಎಂದರೆ ಜನರನ್ನು ಕಂಡರೆ ಇದು ಹೆದರುವುದಿಲ್ಲ, ಇದನ್ನು ಕಂಡರೆ ಜನರೂ ನಡುಗುವುದಿಲ್ಲ, ಬದಲಿಗೆ ಖುಷಿ ಪಡುತ್ತಾರೆ...!

ಹೌದು, ಇಂಥದ್ದೊಂದು ಅಪರೂಪದ ಹಾವು ಸದ್ಯ ಸೇನಾಪಡೆಯಲ್ಲಿ ಪ್ರಯೋಗಕ್ಕೆ ಒಳಪಡುತ್ತಿದೆ. ಇದು 'ಸ್ನೇಕ್ ರೋಬಾಟ್'. ಜನರ ಉಪಕಾರಕ್ಕಾಗಿ ಬಂದಿರುವ ಇದು ಬೆಂಗಳೂರಿನ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಕಲ್ಪನೆಯ ಕೂಸು. ಡಿಆರ್‌ಡಿಒನ 'ಕೃತಕ ಗುಪ್ತಚರ ಮತ್ತು ರೋಬಾಟಿಕ್ಸ್' ಉಪಕರಣಗಳ ಸಂಸ್ಥೆ ಇದನ್ನು ತಯಾರಿಸಿದೆ.

ಕಟ್ಟಡಗಳ ಅವಶೇಷಗಳ ಅಡಿ ಸಿಲುಕಿರುವ ಜನರನ್ನು ರಕ್ಷಣೆ ಮಾಡಲು, ಸಿಲುಕಿರುವವರ ನಿಖರ ಮಾಹಿತಿ ಕಲೆ ಹಾಕಲು ಈ ಹಾವನ್ನು ಸೃಷ್ಟಿ ಮಾಡಲಾಗಿದೆ. ಈಗ ಎಲ್ಲೆಲ್ಲೂ ಕಳಪೆ ಗುಣಮಟ್ಟದ ಕಾಮಗಾರಿ. ಪರಿಣಾಮ ಕಟ್ಟಡ ಕುಸಿತ. ಇದರ ಜೊತೆ ಕೆಲವು ಪ್ರದೇಶಗಳಲ್ಲಿ ಭೂಕಂಪದ ಭೀತಿ. ಬಹುಮಹಡಿ ಕಟ್ಟಡಗಳು ಕುಸಿದರೆ ಬಹಳ ಫಜೀತಿ. ಅಲ್ಲಿ ಎಷ್ಟು ಜನ ಇದ್ದರು, ಎಷ್ಟು ಮಂದಿ ಕಟ್ಟಡದ ಅಡಿ ಸಿಲುಕಿಕೊಂಡಿದ್ದಾರೆ, ಎಷ್ಟು ಜನ ಸತ್ತಿದ್ದಾರೆ ಇತ್ಯಾದಿ ಪತ್ತೆ ಮಾಡುವುದೇ ಪ್ರಯಾಸಕರ.

ಎಷ್ಟೋ ಸಂದರ್ಭಗಳಲ್ಲಿ ಅವಶೇಷಗಳ ಅಡಿ ಜೀವ ಉಳಿದುಕೊಂಡಿದ್ದರೂ ಸೂಕ್ತ ಸಂದರ್ಭದಲ್ಲಿ ರಕ್ಷಣೆ ದೊರಕದೇ ಸಾವನ್ನಪ್ಪುತ್ತಾರೆ. ಇದೇ ಕಾರಣಕ್ಕೆ  ಕಟ್ಟಡಗಳ ಅಡಿ ಸಿಲುಕಿರುವವರ ನಿರ್ದಿಷ್ಟ ಸಂಖ್ಯೆಯನ್ನು ತಿಳಿದು ಸೂಕ್ತ ಸಮಯದಲ್ಲಿ ರಕ್ಷಣಾ ಪಡೆಯ ಸಿಬ್ಬಂದಿಗೆ ನೆರವಾಗಬಲ್ಲ 'ಹಾವು' ಇದಾಗಿದೆ. ಸಂದಿಗೊಂದಿಗಳಲ್ಲಿ ಸಿಬ್ಬಂದಿ ನುಸುಳುವುದು ಕಷ್ಟಸಾಧ್ಯ. ಈ ಕೆಲಸವನ್ನು ಹಾವು ಮಾಡುತ್ತದೆ. ಮೂಲೆಮೂಲೆಗಳಲ್ಲಿ ನುಸುಳಿ ಎಲ್ಲೆಲ್ಲಿ ಜನರು ಸಿಕ್ಕಿ ಬಿದ್ದಿದ್ದಾರೆ, ಅವರ ಸ್ಥಿತಿ ಹೇಗಿದೆ ಇತ್ಯಾದಿ ಚಿತ್ರವನ್ನು ಇದು ತೆಗೆಯುತ್ತದೆ. ಎಂದರೆ ಇದಕ್ಕೆ ಅಳವಡಿಸಲಾಗಿರುವ ಕ್ಯಾಮೆರಾ ಈ ಕೆಲಸ ಮಾಡುತ್ತದೆ.

ಈ 'ಸ್ನೇಕ್ ರೋಬಾಟ್' ಸುಮಾರು1.5 ಮೀಟರ್ ಉದ್ದವಿದೆ. ಅಲ್ಯುಮಿನಿಯಂನಿಂದ ತಯಾರಾಗಿದೆ. ಈಗಾಗಲೇ ಸೇನೆಯಲ್ಲಿ ಪ್ರಾಯೋಗಿಕವಾಗಿ ಇದನ್ನು ಬಳಕೆ ಮಾಡಲಾಗುತ್ತಿದೆ. ಅದು ಅಲ್ಲಿ ಹೇಗೆ ಕೆಲಸ ನಿರ್ವಸುತ್ತದೆ, ಎಷ್ಟು ಸಹಕಾರಿ ಆಗಬಲ್ಲದು ಎಂಬಿತ್ಯಾದಿ ಪ್ರಯೋಗಗಳಲ್ಲಿ ಯಶಸ್ವಿಯಾದರೆ ಉಳಿದ ರಕ್ಷಣಾ ಸಂಘಟನೆಗಳ ಕೈಗೂ ಇದು ದೊರಕಲಿದೆ.

■ ಸುಚೇತನಾ ನಾಯ್ಕ

